# ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ

## ನಮ್ಮ ಬಗ್ಗೆ

1 ಈಗ ಪ್ರಸಿದ್ಧವಾಗಿರುವ "ಭಾರತ ರಾಷ್ಟ್ರೀಯ ಪತ್ರಗಾರ"ವು 1891 ರಲ್ಲಿ "ಇಂಪೀರಿಯಲ್ ರಿಕಾರ್ಡ್ಸ್ ಇಲಾಖೆ" ಎಂಬ ಹೆಸರಿನಿಂದ ದೆಹಲಿಯಲ್ಲಿ ಪ್ರಪ್ರಥಮವಾಗಿ ಅಸ್ತಿತ್ವಕ್ಕೆ ಬಂದಿದ್ದು, ಅಂದಿನಿಂದ ಪತ್ರಾಗಾರ ಚಟುವಟಿಕೆಗಳು ಭಾರತದಲ್ಲಿ ಪ್ರಾರಂಭವಾಗಿರುತ್ತವೆ;

2 1950 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಚಾರಿತ್ರಿಕ ದಾಖಲೆಗಳ ಪರಿವೀಕ್ಷಣಾ ಸಮಿತಿಯನ್ನು ಸ್ಥಾಪಿಸಿದ್ದು; ದಿನಾಂಕ 3.11.1973ರಲ್ಲಿ ಕರ್ನಾಟಕ ಸರ್ಕಾರದ ರಾಜ್ಯ ಪತ್ರಗಾರ ಇಲಾಖೆಯು ಅಸ್ತಿತ್ವಕ್ಕೆ ಬಂದಿರುತ್ತದೆ;

3 ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯು ಕರ್ನಾಟಕ ಸರ್ಕಾರದಲ್ಲಿರುವ ವರ್ತಮಾನದ್ದಲ್ಲದ ದಾಖಲೆಗಳ ಭಂಢಾರವಾಗಿದ್ದು, ಇವುಗಳ ಉಪಯೋಗವನ್ನು ಆಡಳಿತಗಾರರು ಮತ್ತು ಸಂಶೋಧಕರು ಪಡೆದುಕೊಳ್ಳಹುದಾಗಿದೆ;

4 "ದಾಖಲೆ" ಮತ್ತು "ಅಭಿಲೇಖ" ಎಂಬ ಪದಗಳನ್ನು ಒಂದಕ್ಕೆ ಬದಲಾಗಿ ಮತ್ತೊಂದನ್ನು ಉಪಯೋಗಿಸುವ ರೂಢಿಯಿದೆ. ವ್ಯಕ್ತಿಯ ಅಥವಾ ಸಂಸ್ಥೆಯ ದಿನನಿತ್ಯದ ವ್ಯವಹಾರಗಳಿಗೆ ಸಂಬಂಧಿಸಿದವು "ದಾಖಲೆ"ಗಳಾದರೆ, ಚಾರಿತ್ರಿಕ ಮೌಲ್ಯವಿದ್ದು ಶಾಶ್ವತ ಮೌಲ್ಯಗಳುಳ್ಳ ಮುದ್ರಿಸಿದ ಅಥವಾ ಕೈಬರಹದ ದಾಖಲೆಗಳು "ಅಭಿಲೇಖ"ಗಳಾಗುತ್ತವೆ;

5 ಪತ್ರಾಗಾರವು ಕೇವಲ ಚಾರಿತ್ರಿಕ ಮೌಲ್ಯವಿರುವ ಸರ್ಕಾರದ ದಾಖಲಾತಿಗಳಿಗೆ ಮಾತ್ರ ಸೀಮಿತವಾಗಿರದೆ, ಧಾರ್ಮಿಕ ದಾಖಲಾತಿಗಳು, ವ್ಯಾಪಾರ-ವ್ಯವಹಾರಿಕ ದಾಖಲಾತಿಗಳು, ಕೈಗಾರಿಕಾ ದಾಖಲಾತಿಗಳು ಮತ್ತು ಇತರೆ ಖಾಸಗಿ ದಾಖಲಾತಿಗಳನ್ನೂ ಸಹ ಒಳಗೊಂಡಿರುತ್ತದೆ;